ಬಹಳಷ್ಟು ಅನುಕೂಲವಾಗಿದೆ. ಮತ್ತೊಂದು ವಿಷಯವೆಂದರೆ ಕೇಂದ್ರ ಸರ್ಕಾರ ಹಿಂದೆ ಇದಕ್ಕೆ ಗ್ರ್ಯಾಂಟ್ಸ್ ಕೊಡುತ್ತಿತ್ತು ಎನ್ನುವುದು ನನಗೆ ಇರುವಂತಹ ಮಾಹಿತಿ. ಅದಕ್ಕೆ ಕೇಂದ್ರ ಸರ್ಕಾರದ ನೆರವು ಇದಕ್ಕೆ ಇದೆಯೋ ಇಲ್ಲವೋ ಎನ್ನುವಂಥಾದ್ದು ತಾವು ಸ್ಪಷ್ಟೀಕರಣ ನೀಡಬೇಕು.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದವರು ಇದಕ್ಕೆ ಹಣಕಾಸನ್ನು ಒದಗಿಸುತ್ತಿಲ್ಲ. ಆದರೆ ಇದು ಕೇಂದ್ರ ಸರ್ಕಾರದ ಯೋಜನೆ ಇದೆ. ಇದನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರವೇ ಭರಿಸಬೇಕಾಗಿರುವಂತಹ ಸ್ಥಿತಿ ಇದೆ. ಇದು ಉತ್ತಮವಾದಂತಹ ಯೋಜನೆ ಎನ್ನುವುದರಲ್ಲಿ ಎರಡನೇ ಅಭಿಪ್ರಾಯ ಇಲ್ಲ. ಇಲ್ಲಿಯವರೆಗೂ ಕೂಡ ಹಣ ಕೊಟ್ಟಿದ್ದರು ಮತ್ತು ಈ ವರ್ಷದಲ್ಲಿ ಕೂಡ ನಾವು ಉಪ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡಿಕೊಂಡಿದ್ದೇವೆ. ಆಯವ್ಯಯ ತಯಾರಾಗುವಂತಹ ಸಂದರ್ಭದಲ್ಲಿ ಮತ್ತು ಅದರ ಹಿಂದೆ ಕೂಡ ಪತ್ರ ವ್ಯವಹಾರ ಮಾಡಿದ್ದೇವೆ. ಅವರು ಸಹಾನುಭೂತಿಪರರಾಗಿದ್ದಾರೆ. ನಾವು ಆದಷ್ಟು ಮಟ್ಟಿಗೆ ಒತ್ತಾಯ ಮಾಡಿ ಹಣಕಾಸನ್ನು ಬಿಡುಗಡೆ ಮಾಡಿಸುವಂತಹ ಪ್ರಯತ್ನ ಮಾಡುತ್ತೇವೆ.

ಜಮಖಂಡಿ ತಾಲ್ಲೂಕಿನ ರಸ್ತೆಗಳ ಅಭಿವೃದ್ಧಿ

202(2988) ಶ್ರೀ ಸಿದ್ದು ಸಾವದಿ (ಜಮಖಂಡಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ಕ್ಷೇತ್ರದಲ್ಲಿ ನಬಾರ್ಡ್ ಮತ್ತು ಸಿ.ಆರ್.ಎಫ್. ಯೋಜನೆಯಡಿಯಲ್ಲಿ ತೆಗೆದುಕೊಂಡ ರಸ್ತೆ ಅಭಿವೃದ್ಧಿ ಕೆಲಸಗಳೆಷ್ಟು;

ಆ) ಇಡೀ ರಾಜ್ಯದಲ್ಲಿ ಕೈಗೊಂಡ ಸದರಿ ಯೋಜನೆಗಳ ಕಾರ್ಯವೆಷ್ಟು (ಕ್ಷೇತ್ರವಾರು ವಿವರ ಒದಗಿಸುವುದು);

ಇ) ಜಮಖಂಡಿ ಕ್ಷೇತ್ರಕ್ಕೆ ನಬಾರ್ಡ್‌ದಲ್ಲಿ ಕಡಿಮೆ ಹಣವನ್ನು ಒದಗಿಸಲು ಕಾರಣವೇನು ಹಾಗೂ ಸಿ.ಆರ್.ಎಫ್. ನಲ್ಲಿ ಹಣ ಒದಗಿಸದಿರಲು ಕಾರಣವೇನು;

ಈ) ಜಂಕಂಡಿ ಕ್ಷೇತ್ರದಲ್ಲಿ ಬಹಳಷ್ಟು ರಸ್ತೆಗಳು ಹಾಳಾಗಿದ್ದರಿಂದ ಈ ವರ್ಷ ಹೆಚ್ಚು ಹಣ ಒದಗಿಸುವ ಯೋಜನೆ ಸರ್ಕಾರಕ್ಕೆ ಇದೆಯೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಲೋಕೋಪಯೋಗಿ ಇಲಾಖೆಯಡಿ ನಬಾರ್ಡ್ ಯೋಜನೆಯಡಿ 1996-97 ರಿಂದ 2003-04 ರವರೆಗೆ ಒಟ್ಟು 9 ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು 5.10 ಕೋಟಿ ರೂ. ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಸಿಆರ್‌ಎಫ್ ಯೋಜನೆಯಡಿ 1 ರಸ್ತೆ ಅಭಿವೃದ್ಧಿಯನ್ನು 52 ಲಕ್ಷ ರೂ. ಮೊತ್ತದಲ್ಲಿ ಕೈಗೊಳ್ಳಲಾಗಿದೆ.

ಆ) ನಬಾರ್ಡ್ ನೆರವಿನಡಿ 1996-97 ರಿಂದ 2003-04ರ ವರೆಗೆ ಒಟ್ಟು 2166 ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು 1141 ಕೋಟಿ ರೂ.ಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಸಿಆರ್‌ಎಫ್ ಅಡಿಯಲ್ಲಿ 2000-01 ರಿಂದ 2004-05 ರವರೆಗೆ 400 ಕಾಮಗಾರಿಗಳನ್ನು 215.34 ಕೋಟಿ ರೂ.ಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ.

ಕ್ಷೇತ್ರವಾರು ಸಂಕ್ಷಿಪ್ತ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಇ) ಮೇಲೆ ತಿಳಿಸಿದಂತೆ ಜಮಖಂಡಿ ಕ್ಷೇತ್ರದಲ್ಲಿ ನಬಾರ್ಡ್ ನೆರವಿನಡಿ ಈಗಾಗಲೇ 5.10 ಕೋಟಿ ರೂ. ಮೊತ್ತದ 9 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇದಲ್ಲದೆ, 2004–05ನೇ ಸಾಲಿನಲ್ಲಿ 55 ಲಕ್ಷ ರೂ. ಮೊತ್ತದ ಚಿಮ್ಮಡ–ಯರಗಟ್ಟಿ ರಸ್ತೆ ಅಭಿವೃದ್ಧಿ ಪ್ರಸ್ತಾವನೆಯನ್ನು ನಬಾರ್ಡ್‌ನ ಅನುಮೋದನೆಗೆ ಕಳುಹಿಸಲಾಗಿದೆ.

ಸಿಆರ್‌ಎಫ್ ಅಡಿಯಲ್ಲಿ 52 ಲಕ್ಷ ಮೊತ್ತದ ರಸ್ತೆ ಅಭಿವೃದ್ಧಿಯನ್ನು ಈಗಾಗಲೇ ಕೈಗೊಳ್ಳಲಾಗಿದ್ದು, ಕುಡಚಿ–ಜಮಖಂಡಿ ರಸ್ತೆಯ ಕಿಮೀ 31 ರಿಂದ 44ರ ವರೆಗಿನ ಆಯ್ದ ಭಾಗಗಳ ಅಭಿವೃದ್ಧಿ ಪ್ರಸ್ತಾವನೆಯನ್ನು 40.00 ಲಕ್ಷ ರೂ. ಮೊತ್ತಕ್ಕೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಈ) ಜಮಖಂಡಿ ಕ್ಷೇತ್ರದಲ್ಲಿ ಇರುವ ರಾಜ್ಯ ಹೆದ್ದಾರಿಗಳು ಮತ್ತು ಜಿಲ್ಲಾ ಮುಖ್ಯ ರಸ್ತೆಗಳು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುತ್ತವೆ. ಈ ರಸ್ತೆಗಳ ತಗ್ಗು ಗುಂಡಿಗಳನ್ನು ತುಂಬಿ ದುರಸ್ತಿ ಕೆಲಸಗಳನ್ನು ಕೈಗೊಳ್ಳಲಾಗಿದ್ದು, ಮಾರ್ಚ್ 05ರ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು.

ಇದಲ್ಲದೆ, ರಾಜ್ಯ ಹೆದ್ದಾರಿಗಳ ನಿರ್ವಹಣೆಯನ್ನು 2005–06ನೇ ಸಾಲಿನಿಂದ ಸುಮಾರು ನೂರು ಅವಧಿಗೆ ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ ಮತಿಯಿಂದ ಕೈಗೊಳ್ಳಲು ಯೋಜಿಸಲಾಗಿದೆ.

CONSTITUENCY WISE ABSTRACT OF WORKS TAKEN UP UNDER NABARD & CRF

Sl. No.	Name of the Constituency	Projects taken up under NABARD from 1996-97 to 2003-04			Projects taken up under CRF from 2000-01 to 2004-05		
		Nos	Part	Amt	Nos	Part	Amt
1	2	3	4	5	6	7	8
DISTRICT: BELGAUM							
1	Arabhavi	6		419.00	1		80.00
2	Athani	8		535.00	1		80.00
3	Bagewadi	11		349.00	1		130.00
4	Baithongala	9		366.00	0	1	40.00
5	Belgaum	2		45.00	0		0.00
6	Chikkodi	10		290.00	0		0.00
7	Gokak	1		464.00	2		100.00

1	2	3	4	5	6	7	8
8	Hukkeri	11		865.00	1		60.00
9	Kagawad	9		435.00	0		0.00
10	Khanapur	7		342.00	1		80.00
11	Kittur	12		629.00	1		50.00
12	Nippani	12		601.00	0		0.00
13	Parasgad	7		370.00	2	1	194.00
14	Raibagh	8		494.00	0		0.00
15	Ramdurg	8		506.00	5		653.00
16	Sankeshwar	8		399.00	1		70.00
17	Sadalga	8		684.00	7		511.00
18	Uchagaon	3		214.00	0		0.00
DISTRICT: BIJAPUR							
1	B. Bagewadi	12		657.00	2		110.00
2	Bijapur	4		416.00	2		125.00
3	Balloli	8		589.00	4		300.00
4	H. Hipparagi	6		343.00	1		50.00
5	Indi	7		651.00	1		104.00
6	Muddebihal	4		314.00	1		50.00
7	Sindhgi	13		850.00	1		75.00
8	Tikota	5		533.00	1		70.00
DISTRICT: BAGALKOT							
1	Badami	11	1	634.00	1	1	255.00
2	Bagalkot	7	1	405.00	3		160.00
3	Bilgi	11		570.00	1		100.00
4	Guledgudda	7	1	348.00	1	1	110.00
5	Hungund	7		464.00	2		130.00
6	Jamakhandi	8		451.00	1		52.00
7	Mudhol	15		831.00	1		50.00
DISTRICT: DHARWAD							
1	Dharwad (R)	6		424.00	1		50.00
2	Dharwad (U)	1		100.00	4		240.00
3	Hubli Rural	5		573.00	8		521.00

1	2	3	4	5	6	7	8
4	Hubli Urban	1		146.00	1		60.00
5	Khalaghatgi	3		244.00	4		210.00
6	Kundgol	5		510.00	1		60.00
7	Navalgund	8	2	917.00	2		110.00
DISTRICT: KOPPAL							
1	Gangavathi	8		380.00	2		110.00
2	Kankagiri	9		706.00	1		60.00
3	Koppal	4		355.00	3		150.00
4	Kushtagi	6		357.00	1		50.00
5	Yelburga	11		601.00	3		220.00
DISTRICT: GADAG							
1	Gadag	10	1	754.00	2	1	240.00
2	Mundargi	7		624.00	1	1	90.00
3	Nargund	5	2	743.00	1		80.00
4	Ron	12		822.00	4		285.00
5	Shirahatti	8		609.00	3		170.00
DISTRICT: HAVERI							
1	Byadagi	8		455.00	2		170.00
2	Hangal	13		1001.00	2		120.00
3	Haveri	10		524.00	1		50.00
4	Hirekerur	14		547.00	4		255.00
5	Ranebennur	11		746.00	3		150.00
6	Shiggaon	8		463.00	1		80.00
DISTRICT: UTTARA KANNADA							
1	Ankola	10		543.00	3		280.00
2	Bhatkal	7		464.00	1		30.00
3	Haliyal	21		1015.00	4		168.00
4	Karwar	11		859.00	3		290.00
5	Kumta	13		979.00	1		40.00
6	Sirsi	9		481.00	2		100.00

1	2	3	4	5	6	7	8
DISTRICT: BIDAR							
1	Aurad	6		386.00	4		305.00
2	B. Kalyana	10		605.00	1		100.00
3	Bhalki	6	1	362.00	7		415.00
4	Bidar	5	1	235.00	3		170.00
5	Hulsoor	13		538.00	5		625.00
6	Humnabad	10	1	634.00	4		313.00
DISTRICT: GULBARGA							
1	Afzalpur	7		745.00	0		0.00
2	Aland	5		643.00	2		88.00
3	Chincholi	10		489.00	1		95.00
4	Chittapur	13		956.00	1		54.00
5	Gulbaraga	6		297.00	0		0.00
6	Gurumitkal	20		1316.00	4		270.00
7	Jevargi	25		1520.00	6		474.00
8	Kamalapur	9		555.00	0		0.00
9	Sedam	9		762.00	1		50.00
10	Shahabad	13		718.00	1		80.00
11	Shahapur	10		646.00	1		201.00
12	Shorapur	11		597.00	0		0.00
13	Yadgir	13		840.00	2		171.00
DISTRICT: RAICHUR							
1	Deodurg	8		641.00	1		30.00
2	Kalmala	5		727.00	1		53.00
3	Lingasugur	9		666.00	1		50.00
4	Manvi	11		823.00	3		176.00
5	Raichur	12		551.00	2		111.00
6	Sindhnoor	9		558.00	0		0.00
DISTRICT: BELLARY							
1	Bellary	1		72.00	0		0.00
2	Hadagali	8		626.00	0		0.00
3	Hospet	6		330.00	0		0.00

1	2	3	4	5	6	7	8
4	Kottur	4		404.00	0		0.00
5	Kudligi	5		249.00	0		0.00
6	Kurugodu	6		517.00	0		0.00
7	Sandur	11		625.00	0		0.00
8	Siraguppa	5		520.00	0		0.00
DISTRICT: BANGALORE							
1	Anekal	12		291.00	2		130.00
2	Channapatna	10		476.00	3	1	488.00
3	D.B. Pura	8		354.00	2		110.00
4	Devanahalli	9		157.00	0		0.00
5	Hosakote	9		365.00		1	100.00
6	Kanakapura	17		694.00	5		440.00
7	magadi	12		527.00	1		80.00
8	Nelamangala	12		410.00	0		0.00
9	Ramanagara	9		381.00	1		70.00
10	Sathanur	21		714.00	3		155.00
11	Uttarahalli	4		168.00	0		0.00
12	Varthur	1		77.00	0		0.00
13	Yelahanka	10		325.00	0		0.00
DISTRICT: KOLAR							
1	Bagepalli	13		520.00	2		125.00
2	Bethamangala	14		392.00	3		130.00
3	Chickkaballapur	11		400.00	1		40.00
4	Chitamani	16		657.00	4		345.00
5	Gouribidanur	13		553.00	3		170.00
6	K.G.F.	1		17.00			
7	Kolar	12		404.00	3		170.00
8	Malur	16		574.00	2	1	194.00
9	Mulbagal	19		836.00	3		170.00
10	Shidlaghatta	15		617.00	3		170.00
12	Vemgal	33		1291.00	4		145.00

1	2	3	4	5	6	7	8
DISTRICT: TUMKUR							
1	Bellavi	12	3	538.00	2		140.00
2	C.N. Halli	9		523.00	0		0.00
3	Gubbi	9	2	376.00	1		60.00
4	Huliyurdurga	9		508.00		3	629.00
5	Kallambella	17		869.00	2		280.00
6	Koratagere	13		368.00	0		0.00
7	Kunigal	13		501.00		2	600.00
8	Madhugiri	11		458.00	0		0.00
9	Pavagada	10		415.00	0		0.00
10	Sira	11		510.00	1		70.00
11	Tiptur	12		397.00	0		0.00
12	Tumkur	8	1	371.00	4	1	310.00
13	Turuvekere	16	1	525.00	6		505.00
DISTRICT: MYSORE							
1	Bannur	9		315.00	1		80.00
2	Chamundeshw	15		740.00	3		170.00
3	H.D. Kote	5		240.00	0		0.00
4	Hunsur	6		328.00	0		0.00
5	K.R. Nagar	16		767.00	1		75.00
6	Nanjangud	7		430.00	1		55.00
7	Periyapatna	9		502.00	1		50.00
8	T. Narasipura	8		426.00	1		50.00
	Chamaraja				1		80.00
DISTRICT: CHAMARAJA NAGARA							
1	C.R. Nagara	5	1	355.00	2		131.00
2	Gundlupet	10		311.00	1		50.00
3	Hanur	5		352.00	1		80.00
4	SM Halli	12	1	580.00	1		50.00
5	Kollegala	2		454.00	1		30.00

1	2	3	4	5	6	7	8
DISTRICT: MANDYA							
1	Keragodu	13		639.00	2	1	70.00
2	Kirugavalu	13	2	701.00	6	1	1068.00
3	Krishnaraja Pe	9		504.00	3		190.00
4	Maddur	26	1	1255.00	1	2	788.00
5	Malavalli	11	2	461.00	1	2	299.00
6	Mandya	12		461.00	2	1	165.00
7	Nagamangala	8		452.00	0		0.00
8	Pandavapura	12		405.00	1		70.00
9	Srirangapatna	19		448.00	0	1	100.00
DISTRICT: DAVANAGERE							
1	Channagiri	12		570.00	1		100.00
2	Davanagere	6		583.00	3		230.00
3	Harappanahalli	9		563.00	0		0.00
4	Harihara	4		231.00	2		140.00
5	Honnali	9		453.00	1		100.00
6	Jagalur	6		507.00	1		75.00
7	Mayakonda	8		568.00	2		110.00
DISTRICT: SHIMOGA							
1	Bhadravathi	5		162.00	1		37.00
2	Holehonnur	19		750.00	1		80.00
3	Hosanagara	10		366.00	1		40.00
4	Sagara	17		1002.00	1		99.00
5	Shikaripura	10		347.00	2		180.00
6	Shimoga	10		245.00	2		170.00
7	Soraba	12		856.00	1		75.00
8	Thirthahalli	8		470.00	3		260.00
DISTRICT: CHITRADURGA							
1	Bharamasagar	10		510.00	0		0.00
2	Chalikakere	9		502.00	3		55.00
3	Chitradurga	8		405.00	3		160.00
4	Hiriyur	12		810.00	2		85.00

1	2	3	4	5	6	7	8
5	Holalkere	9		575.00	2		80.00
6	Hosadurga	9		668.00	1		70.00
7	Molakalmuru	9		540.00	0		0.00
DISTRICT: HASSAN							
1	Arasikere	10		591.00	4		235.00
2	Arakalgudu	9		392.00	4	1	380.00
3	Belur	9		449.00	1		50.00
4	Gandasi	23	2	1049.00	7		636.00
5	H.N. Pura	11	2	646.00	4	1	300.00
6	Hassan	9	3	542.00	6		1258.00
7	S.R. Belagola	10	2	780.00	5		335.00
8	Sakaleshapura	12		502.00	3		167.00
DISTRICT: CHICKMAGALUR							
1	Birur	14		633.00	1		50.00
2	Chickamagalur	27		845.00	2		113.00
3	Kadur	13		635.00	3		192.00
4	Mudigere	17		701.00	3		164.00
5	Sringeri	17		816.00	5		399.00
6	Tarikere	15		555.00	2		100.00
DISTRICT: UDUPI							
1	Brahmavar	12		964.00	1		70.00
2	Byndoor	11		416.00	1		80.00
3	Karkala	13		425.00	1		80.00
4	Kapu	3		350.00	3		242.00
5	Kundapur	9		389.00	4		240.00
6	Udupi	11		352.00	2		160.00
DISTRICT: KODAGU							
1	Madikeri	26		683.00	1		60.00
2	Somawarpet	12		343.00	3		170.00
3	Virajpet	16		627.00	1		55.00

1	2	3	4	5	6	7	8
DISTRICT: DAKSHINA KANNADA							
1	Belthangadi	9		441.00	4		413.00
2	Bhantwal	20		676.00	4	1	526.00
3	Mangalore	0		0.00	1		80.00
4	Moodabidri	11		414.00		1	90.00
5	Puttur	11		363.00	3		150.00
6	Sullya	12		364.00	3		100.00
7	Surathkal	8		238.00	1		60.00
8	Ullal	4	1	173.00	1		90.00
9	Vitla	10	1	418.00	1		90.00

ಶ್ರೀ ಸಿದ್ದು ಸಾವದಿ: ಮಾನ್ಯ ಅಧ್ಯಕ್ಷರೇ, 2004–05 ರಲ್ಲಿ ನಬಾರ್ಡ್ ಯೋಜನೆಯಡಿ ನನ್ನ ಕ್ಷೇತ್ರ ಜಮಖಂಡಿಯಲ್ಲಿ ಕೇವಲ 55 ಲಕ್ಷ ರೂಪಾಯಿಗಳ ಒಂದು ರೋಡನ್ನು ಮಾತ್ರ ತೆಗೆದುಕೊಂಡಿದ್ದಾರೆ. ನನಗೆ ಗೊತ್ತಿದ್ದ ಮಟ್ಟಿಗೆ ಉಳಿದೆಲ್ಲಾ ಕ್ಷೇತ್ರಗಳಲ್ಲಿ ಒಂದು ಮತ್ತು ಎರಡು ಕೋಟಿ ರೂಪಾಯಿಗಳವರೆಗೆ ಕೆಲಸ ತೆಗೆದುಕೊಂಡಿದ್ದಾಗಿದೆ. ಜಮಖಂಡಿ ಕ್ಷೇತ್ರದಲ್ಲಿ ಮಾತ್ರ ಇಷ್ಟು ಕಡಿಮೆ ನಬಾರ್ಡ್ ಯೋಜನೆಯಡಿ ತೆಗೆದುಕೊಂಡಿದ್ದಕ್ಕೆ ಕಾರಣ ತಿಳಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು): ಮಾನ್ಯ ಅಧ್ಯಕ್ಷರೇ ಕೆಲವು ಕ್ಷೇತ್ರಗಳಲ್ಲಿ ಹಿಂದಿನ ಸಾಲಿನಲ್ಲಿ ಹಣ ಕಡಿಮೆ ಕೊಟ್ಟಿದ್ದರು, ಆದ್ದರಿಂದ ಮಾಡಿದ್ದೇವೆ. ಆ ಕ್ಷೇತ್ರದಲ್ಲಿ ಮುಂದೆ ಬರುವಂತಹ ಸಂದರ್ಭದಲ್ಲಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿದ್ದು ಸಾವದಿ: ಮಾನ್ಯ ಅಧ್ಯಕ್ಷರೇ, ಸಿ.ಆರ್.ಎಫ್. ಯೋಜನೆಯಡಿಯಲ್ಲೂ ಸಹ ನಮ್ಮ ಕ್ಷೇತ್ರದಲ್ಲಿ ಯಾವುದೇ ರಸ್ತೆಗಳನ್ನು ತೆಗೆದುಕೊಂಡಿಲ್ಲ. ನಮ್ಮ ಕ್ಷೇತ್ರದಲ್ಲಿ ಅದು ಅತಿ ದೊಡ್ಡ ತಾಲ್ಲೂಕು ಆಗಿರುವುದರಿಂದ ಮತ್ತು ಬಹಳಷ್ಟು ರಸ್ತೆಗಳು ಹಾಳಾಗಿರುವುದರಿಂದ ಸಿ.ಆರ್.ಎಫ್. ಯೋಜನೆಯಡಿಯಲ್ಲೂ ಸಹ ನಮ್ಮ ಕ್ಷೇತ್ರದಲ್ಲಿ ಕೆಲಸ ತೆಗೆದುಕೊಂಡಿಲ್ಲ. ಅದಕ್ಕೆ ಕಾರಣ ಏನು?

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೇ, ಈಗಾಗಲೇ ಕೇಂದ್ರ ಸರ್ಕಾರಕ್ಕೆ 120 ಕ್ಷೇತ್ರದ್ದು ಪ್ರಸ್ತಾವ ಕಳುಹಿಸಿದ್ದೇನೆ. ಅದು ಬಂದ ತಕ್ಷಣವೇ ಮಾಡುತ್ತೇನೆ.